ಎಂವಿಸಿ.ನಂ. 299/2024 ಆರ್‌ಡಬ್ಲೂಃ 1

ದಿನಾಂಕಃ 14-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರವಾಗಿಃ ಶ್ರೀ ಬಿ ಎಸ್ ಯು ವಕೀಲರಿಂದಃ**

2. ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು ನಿಆರ್ -1 ಎಂದು, ದೂರಿನ ಯಥಾ ನಕಲನ್ನು ನಿಆರ್ -2 ಎಂದು, ನಿಆರ್ -1 ಮತ್ತು ನಿಆರ್ -2 ಅರ್ಜಿದಾರ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿಶಾನೆಯಾಗಿ ಗುರುತಿಸಲಾಯಿತು. ಸಾಕ್ಷಿದಾರರ ಗಂಡ ಮಹಮ್ಮದ್ ಇಸಾರ್ ರವರ ಚಾಲನಾ ಪರವಾನಿಗೆಯ ನೋಟರೈಜ್ ಪ್ರತಿಯನ್ನು ನಿಆರ್ -3 ಎಂದು ಗುರುತಿಸಲಾಯಿತು .

(ಸಾಕ್ಷಿ ನಿಪಿ-3 ರ ದಾಖಲಾತಿಯ ಮೂಲ ಪ್ರತಿಯನ್ನು ಹಾಜರು ಪಡಿಸಿದ್ದು ನೋಟರೈಜ್ ಪ್ರತಿಯೊಂದಿಗೆ ತಾಳೆ ಮಾಡಿ ನೋಡಲಾಗಿ ಸರಿ ಇದ್ದು ಮೂಲ ಪ್ರತಿಯನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು. )

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು 1 ನೇ ಎದುರುದಾರರ ವಿರುದ್ಧ ವಜಾ ಮಾಡಬೇಕೆಂದು ಪ್ರಾರ್ಥನೆ.

**ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಎಮ್ ಡಿ ಆರ್ ವಕೀಲರಿಂದ :**

3. ನನ್ನ ಯಜಮಾನರು ಚಲಾಯಿಸುತ್ತಿದ್ದ ಗಾಡಿಯಲ್ಲಿ ನಾನು ಮುಂದುಗಡೆ ಕುಳಿತ್ತಿದ್ದೆ. ನಾವು ಓವರ ಟೇಕ್ ಮಾಡಿಕೊಂಡು ಹೋಗುತ್ತಿದ್ದಾಗ ನಮ್ಮ ಗಾಡಿ 407 ಟಿಪ್ಪರ ಗಾಡಿಗೆ ತಾಗಿತ್ತು ಎಂದರೆ ಸಾಕ್ಷಿ ನಾನು ಡೋರ ಸೈಡ್ ಕುತಿದ್ದೆ, ಅದು ನನ್ನ ಸೈಡಿಗೆ ಬಂದಿತ್ತು , ಆ ಕಾರಣ ನನಗೆ ಗೊತ್ತಾಗಲಿಲ್ಲ. ನಮ್ಮ ಗಾಡಿಯ ಮುಂಭಾಗಕ್ಕೆ ಜಖಂ ಆಗಿತ್ತು . ನಮ್ಮ ವಾಹನ ಮುಂದೆ ಹೋಗಿದ್ದರೆ ಟಿಪ್ಪರನವರು ನಮಗೆ ಡಿಕ್ಕಿ ಮಾಡುವ ಸಾಧ್ಯತೆ ಇತ್ತು ಎಂದರೆ ಸರಿ . ನಮ್ಮ ವಾಹನ ಡಿಕ್ಕಿ ಆದ ನಂತರ ಟಿಪ್ಪರ ವಾಹನ ಚಾಲಕ ತಮ್ಮವಾಹನವನ್ನು ರಸ್ತೆಯ ಎಡಭಾಗಕ್ಕೆ ತೆಗೆದುಕೊಂಡರು ಎಂದರೆ ನನಗೆ ಏನು ಗೊತ್ತಾಗಲಿಲ್ಲ. ಪೋಲಿಸ್ ಠಾಣೆಗೆ ದೂರನ್ನು

ದಾಖಲಿಸಲು ಹೋದಾಗ ನನ್ನ ಜೊತೆ ನನ್ನ ಇಬ್ಬರು ಅಕ್ಕನ ಮಕ್ಕಳು ಇದ್ದರು . ಫಿರ್ಯಾದು ಬರೆಯಲು ಮಾಹಿತಿಯನ್ನು ನಾನು ಕೊಟ್ಟಿರುತ್ತೇನೆ . ನಾನು ಹೇಳಿದ ರೀತಿಯಲ್ಲಿ ಅವರು ಬರೆದಿರುತ್ತಾರೆ . ಫಿರ್ಯಾದಿನಲ್ಲಿ ಎದುರುಗಡೆ ವಾಹನ ಯಾವ ರೀತಿಯಲ್ಲಿ ಬಂದಿತು ಗೊತ್ತಾಗಲಿಲ್ಲ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿ ನನಗೆ ಎಚ್ಚರ ತಪ್ಪಿತ್ತು ನನಗೆ ಏನು ಗೊತ್ತಾಗಲಿಲ್ಲ ಎಂದು ನುಡಿದಿರುತ್ತಾರೆ . ನನ್ನ ಯಜಮಾನರಿಗೆ ಕಾಲಿಗೆ ಪೆಟ್ಟಾಗಿತ್ತು ಅವರು ಮಾತನಾಡುತ್ತಿದ್ದರು . ಅವರನ್ನು ಪ್ರಥಮವಾಗಿ ಕುಮಟಾ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲಾಯಿತು . ಅಪಘಾತ ನನ್ನ ಯಜಮಾನರ ನಿರ್ಲಕ್ಷತನದಿಂದ ಆಗಿದೆ ಹೊರತು ಟಿಪ್ಪರ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ . ನನ್ನ ಗಂಡನ ತಪ್ಪನ್ನು ಮರೆ ಮಾಚಲು ಪೋಲಿಸ್ ಠಾಣೆಯಲ್ಲಿ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಅದಕ್ಕೆ ಪೂರಕವಾಗಿ ನ್ಯಾಯಾಲಯದಲ್ಲಿ ಟಿಪ್ಪಟ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಎಸ್ ಎಮ್ ಬಿ ವಕೀಲರಿಂದ :</u>**

4. ಆ ದಿನ ನಾವು ಹೋಗುತ್ತಿದ್ದ ಕಾರನ್ನು ನನ್ನ ಗಂಡ ಚಾಲನೆ ಮಾಡುತ್ತಿದ್ದರು . ಕಾರಲ್ಲಿ ನಾವು ಒಟ್ಟೂ ಮೂರು ಜನ ಇದ್ದೆವು . ನನ್ನ ಯಜಮಾನರು ರಸ್ತೆಯ ಎಡಬದಿಯಲ್ಲಿ ನಿಧಾನವಾಗಿ ಕಾರನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಟಿಪ್ಪರ ಚಾಲಕ ಒಂದೇ ಸಾರ್ತಿ ನನ್ನ ಸೈಡಿಗೆ ಬಂದರು ನಂತರ ಏನಾಯಿತು ಗೊತ್ತಿಲ್ಲ. ಟಿಪ್ಪರ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಕಾರಣ ನಾನು ಟಿಪ್ಪಟ ಚಾಲಕನ ವಿರುದ್ಧ ದೂರನ್ನು ದಾಖಲಿಸಿದ್ದೇನೆ.

**<u>ಪಾಟೀ ಸವಾಲುಃ 3 ನೇ ಎದುರುದಾರರ ಪರಃ ಶ್ರೀ ವಾಯ್ ವಿ ಎಸ್ ವಕೀಲರಿಂದ :</u>**

5. ನಾನು ನೀಡಿರುವ ಕಂಪ್ಲೆಂಟ್ ಮೇಲೆ ಪೋಲಿಸರು ತನಿಖೆ ಮಾಡಿದ್ದಾರೆ . ಸದರಿ ಕಂಪ್ಲೆಂಟ್ ಸುಳ್ಳು ಎಂದು ಪೋಲಿಸರು ನ್ಯಾಯಾಲಯಕ್ಕೆ ಬಿ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.